# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 288

**1 ಫೆಬ್ರವರಿ 2026 * ಭಾನುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗಾಯನ



ಪಂ. ಎಂ. ವೆಂಕಟೇಶಕುಮಾರ್



ಪ್ರೊ. ನರೇಂದ್ರ ಎಲ್. ನಾಯಕ್
ಹಾರ್ಮೋನಿಯಂ



ಪಂ. ಕೇಶವ ಜೋಷಿ
ತಬಲ

ಸರ್ವರಿಗೂ ಹಾರ್ದಿಕ ಸುಸ್ವಾಗತ

**ಪಂ. ಎಂ. ವೆಂಕಟೇಶಕುಮಾರ್‌ರವರು** ರಾಷ್ಟ್ರದ ಅತ್ಯುನ್ನತ ಹಿಂದೂಸ್ತಾನಿ ಗಾಯಕರಲ್ಲೊಬ್ಬರು. ಇವರು ಬಳ್ಳಾರಿ ಜಿಲ್ಲೆಯ ಲಕ್ಷ್ಮೀಪುರದಲ್ಲಿ 1953ರಲ್ಲಿ ಜನಿಸಿದರು. ತಾಯಿ ಪಾರ್ವತಮ್ಮನವರು. ತಂದೆ ಹೂಲೆಪ್ಪನವರು ಜಾನಪದ ಕಲಾವಿದರು, ಕರ್ನಾಟಕ ಸಂಗೀತವನ್ನು ಬಲ್ಲವರು. ರಾಮಾಯಣ–ಮಹಾಭಾರತದ ಸನ್ನಿವೇಶಗಳನ್ನು ನಿರರ್ಗಳವಾಗಿ ಸಂಗೀತದ ಮಾಧ್ಯಮದಲ್ಲಿ ಪ್ರಸ್ತುತಪಡಿಸಬಲ್ಲ ಸಾಮರ್ಥ್ಯ ಹೊಂದಿದ್ದರು. ಸೋದರಮಾವ ಶ್ರೀ ಬೆಳಗಲ್ ವೀರಣ್ಣನವರು ನಾಡಿನ ವಿಖ್ಯಾತ ರಂಗಭೂಮಿ ಕಲಾವಿದರು. ಬಾಲ್ಯದಿಂದಲೇ ಸಂಗೀತದತ್ತ ಒಲವು ಹೊಂದಿದ್ದ ವೆಂಕಟೇಶಕುಮಾರ್‌ರವರನ್ನು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಶ್ರೀ ಪುಟ್ಟರಾಜ ಗವಾಯಿಗಳ ಬಳಿಗೆ ತಂದೊಪ್ಪಿಸಲಾಯಿತು. ಅವರ ಪದತಲದಲ್ಲಿ ಕುಳಿತು ಗುರು–ಶಿಷ್ಯ ಪರಂಪರೆಯಲ್ಲಿ ಸುಮಾರು 12 ವರ್ಷಗಳ ಕಾಲ ಸಂಪ್ರದಾಯಬದ್ಧವಾಗಿ ಸಂಗೀತಾಧ್ಯಯನ ಮಾಡಿದರು.

ಗುರುಗಳಿಂದ ಕಿರಾಣಾ ಹಾಗೂ ಗ್ವಾಲಿಯರ್ ಘರಾಣೆ ಪದ್ಧತಿಯಲ್ಲಿ ಕಠಿಣತಮ ತಾಲೀಮು ದೊರೆತ ಪರಿಣಾಮವಾಗಿ ಓರ್ವ ಪ್ರಬುದ್ಧ ಗಾಯಕರಾಗಿ ರೂಪುಗೊಂಡರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ 33 ವರ್ಷಗಳ ನಿರಂತರ ಸೇವೆ ಸಲ್ಲಿಸಿದರು. ಪಾಂಡಿತ್ಯಪೂರ್ಣ ಶಾಸ್ತ್ರೀಯ ಸಂಗೀತದೊಂದಿಗೆ ಮನಮೋಹಕ ಠುಮ್ರಿ, ದಾಸಸಾಹಿತ್ಯ, ವಚನಸಾಹಿತ್ಯ, ಸಂತವಾಣಿ, ಮರಾಠಿ ಅಭಂಗಗಳ ಭಾವಪೂರ್ಣ ಹಾಡುಗಾರಿಕೆ ಮೂಲಕ ಶ್ರೋತೃಗಳನ್ನು ನಾದಲೋಕದಲ್ಲಿ ವಿಹರಿಸುವಂತೆ ಮಾಡುವ ಸಾಮರ್ಥ್ಯವುಳ್ಳವರು. ಇವರ ಅಪ್ರತಿಮ ಸಂಗೀತ ಸೇವೆಯನ್ನು ಗಮನಿಸಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ವಿಶ್ವವಿದ್ಯಾಲಯ, ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ, ಹಂಪಿಯ ಕನ್ನಡ ವಿಶ್ವವಿದ್ಯಾಲಯ 'ನಾಡೋಜ'ರೆಂದು ಗೌರವಿಸಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಧ್ಯಪ್ರದೇಶ ಸರ್ಕಾರದ ಕಾಳಿದಾಸ್ ಸಮ್ಮಾನ್, ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳ ಸಂಗೀತ ನೃತ್ಯ ನಾಟಕ ಅಕ್ಯಾಡೆಮಿ ಪ್ರಶಸ್ತಿ ಹಾಗೂ ನಿಜಗುಣ–ಪುರಂದರ ಪ್ರಶಸ್ತಿ ಮುಂತಾದ ಪ್ರತಿಷ್ಠಿತ ಪುರಸ್ಕಾರಗಳು ಇವರಿಗೆ ಸಂದಿವೆ.

**ಪ್ರೊ. ನರೇಂದ್ರ ಎಲ್. ನಾಯಕ್‌ರವರು** ಖ್ಯಾತ ಸಂಗೀತ ದಿಗ್ಗಜರುಗಳಾದ ಪಂ. ವಸಂತ್ ಕನಕಾಪುರ್, ಉಸ್ತಾದ್ ರಫೀಕ್ ಖಾನ್ ಮತ್ತು ಪಂ. ವ್ಯಾಸಮೂರ್ತಿ ಕಟ್ಟಿಯವರ ಬಳಿ ಸಂಗೀತ ಶಿಕ್ಷಣ ಪಡೆದು ಒಳ್ಳೆಯ ಗಾಯಕರಾಗಿ ಮತ್ತು ಹಾರ್ಮೋನಿಯಂ ಕಲಾವಿದರಾಗಿ ರೂಪುಗೊಂಡಿದ್ದಾರೆ. ಬಾಲ್ಯದಿಂದಲೂ ಸಂಗೀತದ ಬಗ್ಗೆ ಅದಮ್ಯ ಆಸಕ್ತಿ. ಹಲವಾರು ಸಂಗೀತ ದಿಗ್ಗಜರ ಜೊತೆಗೆ ವೇದಿಕೆ ಹಂಚಿಕೊಂಡಿರುವವರು. ಅಖಿಲ ಭಾರತ ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಮಂಗಳೂರಿನ ಸಾಂಸ್ಕೃತಿಕ ಸಂಸ್ಥೆ ಸಂಗೀತ ಭಾರತ್ ಫೌಂಡೇಷನ್ನಿನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸೂರತ್ಕಲ್‌ನ ಎನ್‌ಐಟಿಕೆ ಕಾಲೇಜಿನಲ್ಲಿ ಪ್ರಾಧ್ಯಾಪಕರೂ ಆಗಿರುವ ಇವರು ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ಅಸಾಧಾರಣ ಸಾಧನೆ ಮಾಡಿದ್ದಾರೆ.

**ಪಂ. ಕೇಶವ್ ಜೋಷಿಯವರು** ಎಂಟನೆಯ ವರ್ಷದಿಂದಲೇ ಸಂಗೀತದತ್ತ ಆಕರ್ಷಿತರಾದವರು. ಮೊದಲಿಗೆ ಪಂ. ಆರ್.ಎಚ್. ಮೋರೆಯವರ ಬಳಿ 12 ವರ್ಷ ಶಿಷ್ಯವೃತ್ತಿ, ಅನಂತರ ಪಂ. ಕರವೀರ್ ಮಲ್ಲಾಪುರರವರ ಬಳಿ ಶಿಕ್ಷಣ ಮುಂದುವರಿಕೆ. ಬಳಿಕ ಬನಾರಸ್ ಘರಾನಾದ ಪಂ. ಈಶ್ವರಲಾಲ್ ಮಿಶ್ರ ಮತ್ತು ಧಾರವಾಡದ ಪಂ. ಸೂರಜ್ ಪುರಂದರೆಯವರ ಬಳಿ ಉನ್ನತ ತರಬೇತಿ. ರಾಷ್ಟ್ರೀಯ ಮಟ್ಟದ 'ತಬಲಾ ಅಲಂಕಾರ್' ಪ್ರಶಸ್ತಿಗೆ ಭಾಜನರು. ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ದೇಶದಾದ್ಯಂತ ಹಲವಾರು ಖ್ಯಾತ ಸಂಗೀತಗಾರರಿಗೆ ತಬಲಾ ಸಹಕಾರ ನೀಡಿದ್ದಾರೆ. ಸಾಂಪ್ರದಾಯಿಕ ಶೈಲಿಯನ್ನು ಅನುಸರಿಸುವ ಇವರು ಶಾಸ್ತ್ರಶುದ್ಧಿ, ನಾದಶುದ್ಧಿಗಳಿಗೆ ಪ್ರಾಮುಖ್ಯತೆ ನೀಡುತ್ತಾರೆ. ಪುಟ್ಟರಾಜ ಕೃಪಾಭೂಷಣ, ಪ್ರಸನ್ನವೆಂಕಟ ತಾಳ ಪ್ರವೀಣ, ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಯುವ ಪುರಸ್ಕಾರ್ ಮೊದಲಾದ ಪ್ರಶಸ್ತಿಗಳಿಗೆ ಭಾಜನರು. ಬೆಂಗಳೂರಿನಲ್ಲಿ ನಟರಾಜ ಸಂಗೀತ ವಿದ್ಯಾಲಯವನ್ನು ಮುನ್ನಡೆಸುತ್ತಿದ್ದಾರೆ. ಆವರ್ತನ್ ಸಂಗೀತ ಸಭಾ ಸಂಸ್ಥೆಯ ಮೂಲಕ ಶಾಸ್ತ್ರೀಯ ಸಂಗೀತಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ.

# ಬೆಳದಿಂಗಳ ಸಂಗೀತ 289

**3 ಮಾರ್ಚ್ 2026**

**ಗಾಯನ**

**ವಿದ್ವಾನ್ ಕಾರ್ತಿಕ್ ಮತ್ತೂರ್**

**ವಯೊಲಿನ್**

**ವಿದ್ವಾನ್ ಅನಿರುದ್ಧ್ ಭಾರದ್ವಾಜ್**





**ಮೃದಂಗ**

**ವಿದ್ವಾನ್ ಫಣೀಂದ್ರ ಭಾಸ್ಕರ್**

**ಘಟಂ**

**ವಿದ್ವಾನ್ ಶರತ್ ಕೌಶಿಕ್**



☎ 0821–2548221, 2548223 * ✉ sutturmath@jssonline.org